**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 304–2011**

| | | |
|---|---|---|
| ಹೆಸರು | ಸೊಣ್ಣಪ್ಪ | ಪ್ರಾ.ಸಾ.10 |
| ತಂದೆ/ಗಂಡನ ಹೆಸರು | ವೆಂಕಟರಾಮಯ್ಯ | ಚಾ.ಸಾ.11 |
| ವಯಸ್ಸು | 64 ವರ್ಷ | |
| ಕೆಲಸ | ನಿವೃತ್ತ ಮುಖ್ಯ ಪೇದೆ | ಸಾ.ಪ್ರ.ವ.ಬೋ |
| ವಾಸ | ದೇವನಹಳ್ಳಿ | ದಿ: 27.10.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿರವರಿಂದ: –**

ನಾನು 2005 ರಿಂದ 2012 ರವರೆಗೆ ನಂದುಗುಡಿ ಪೊ.ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ: 08.01.2011 ರಲ್ಲಿ ನನಗೆ ಹಾಗೂ ಚಾ.ಸಾ.10,1,12,13 ರವರನ್ನು ಕರ್ತವ್ಯಕ್ಕೆ ನೇಮಿಸಿ ಅರೇಹಳ್ಳಿಗೆ ಗಸ್ತು ಮಾಡಲು ಕಳುಹಿಸಿದಾಗ ನಾವು ನಾಲ್ಕು ಜನರು ಸೇರಿ ಸದರಿ ಗ್ರಾಮದ ಒಂದೊಂದು ಸ್ಥಳದಲ್ಲಿ ಗಸ್ತು ಮಾಡುತ್ತಿದ್ದಾಗ, ಸಂಜೆ 7.15 ಗಂಟೆಗೆ ಯಾರೋ ಬಂದು ಪೊಲೀಸರ ಜೊತೆ ಗಲಾಟೆ ನಡೆಯುತ್ತಿದೆ ಎಂದು ವಿಷಯ ತಿಳಿಸಿದರು. ಆಗ ನಾವು ನಾಲ್ಕು ಜನರು ಸೇರಿ ಒಂದೆಡೆ ಕೂಡಿದಾಗ ಚಾ.ಸಾ.1 ರವರ ಬಟ್ಟೆಯ ಬಲಗಡೆ ಜೇಬು ಹರಿದುಹೋಗಿತ್ತು. ಆಗ ಚಾ.ಸಾ.1 ರವರನ್ನು ವಿಚಾರಿಸಿದಾಗ, ಸದರಿಯವರು ಗ್ರಾಮಸ್ಥರು ಅವರಿಗೆ ಹೊಡೆದು ಹೊರಟು ಹೋಗಿರುತ್ತಾರೆ ಎಂದು ತಿಳಿಸಿದರು. ಆಗ ಚಾ.ಸಾ.16 ರವರು ಘಟನಾ ಸ್ಥಳಕ್ಕೆ ಬಂದರು. ನಂತರ ನಾವು ಸದರಿ ಘಟನೆಯನ್ನು ಚಾ.ಸಾ.16 ರವರಿಗೆ ತಿಳಿಸಿದೆವು. ಸದರಿ ಘಟನೆ ಅಂಬೇಡ್ಕರ ಪುತ್ಥಳಿಯ ನಿರ್ಮಾಣಕೋಸ್ಕರ ನಡೆದಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿದ್ದು, ಈಗ ತುಂಬಾ ವರ್ಷಗಳಾದ ಕಾರಣ ಈಗ ನನಗೆ ನೆನಪಿಲ್ಲ. ಪೊಲೀಸರಿಗೆ ಘಟನೆ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ಮು.ಮಾ.1 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲು : ಆರೋಪಿ ಪರ ವಕೀಲರಿಂದ**

ಘಟನೆ ನಡೆದ ದಿನ ನಮ್ಮ ಸಿಬ್ಬಂದಿಗಳನ್ನು ಹೊರತು ಪಡಿಸಿ, ಬೇರೆ ಸಾರ್ವಜನಿಕರು ಇದ್ದು, ಅವರ ಹೆಸರುಗಳು ಹೇಳಲು ಬರುವುದಿಲ್ಲ. ಘಟನೆ ನಡೆದ ಸ್ಥಳದ ಚಕ್ಕುಬಂದಿ ನನಗೆ ನೆನಪಿಲ್ಲ. ನಾವು ಬೆಳಿಗ್ಗೆ 7 ಗಂಟೆಗೆ ಪೊ.ಠಾಣೆಯಿಂದ ಹೊರಟೆವು, ಸ್ಥಳಕ್ಕೆ ನಾವು 7.15 ಗಂಟೆಗೆ ತಲುಪಿರುತ್ತೇವೆ. ಚಾ.ಸಾ.1 ರವರ ಬಟ್ಟೆಯನ್ನು ಹರಿದು, ಗಲಾಟೆ ಮಾಡಿದ ಘಟನೆಯನ್ನು ನಾನು ಖುದ್ದಾಗಿ ನೋಡಿಲ್ಲ. ಘಟನೆ ಬಗ್ಗೆ ಗ್ರಾಮಸ್ಥರು ಬಂದು ತಿಳಿಸಿದರು. ಮಾಹಿತಿ ನೀಡಿದ ಗ್ರಾಮಸ್ಥರ ಹೆಸರು ನನಗೆ ಗೊತ್ತಿಲ್ಲ. ನಾನು ಘಟನೆ ನಡೆದ ಸ್ಥಳಕ್ಕೆ ವಿಷಯ ಗೊತ್ತಾದ ಮೇಲೆ ಹೋಗಿರುತ್ತೇನೆ. ಯಾವುದೇ ಘಟನೆ ನಡೆದಿರುವುದಿಲ್ಲ, ಮತ್ತು ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಚಾ.ಸಾ.1 ರವರಿಗೆ ಕರ್ತವ್ಯಕ್ಕೆ ನೇಮಿಸಿರಲಿಲ್ಲ ಹಾಗೂ ಅವರು ಘಟನಾ ಸ್ಥಳದಲ್ಲಿ ಇರಲಿಲ್ಲ, ಹಾಗೂ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಎಲ್ಲಾ ಸಾಕ್ಷಿದಾರರು ಪೊಲೀಸ್ ಸಿಬ್ಬಂದಿಗಳು ಇದ್ದು, ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚಾ.ಸಾ.1 ರವರು ಪೊಲೀಸ್ ಸಿಬ್ಬಂದಿಯಾಗಿದ್ದು, ಅವರು ನೀಡಿದ ಸುಳ್ಳು ದೂರಿನ ಆಧಾರದ ಮೇರೆಗೆ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಯವರ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಚಾ.ಸಾ.1 ರವರ ಪೇದೆ ಸಂಖ್ಯೆ 1196 ಇದ್ದು, ಮು.ಮಾ.1 ಅನ್ನು ಘಟನೆ ನಡೆದ ದಿನ ಸದರಿಯವರು ಧರಿಸಿದ್ದರು. ಮು.ಮಾ.1 ಅನ್ನು ಘಟನೆ ನಡೆದ ಸ್ಥಳದಲ್ಲಿ ಅಮಾನತ್ತುಪಡಿಸಿಕೊಳ್ಳಲಾಯಿತು. ಮು.ಮಾ.1 ಅನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಹಾಜರಿದ್ದ ಸಾರ್ವಜನಿಕರ ಹೆಸರು ನನಗೆ ನೆನಪಿಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**